ಮೆರವಣಿಗೆ ಇತ್ಯಾದಿ ಅರ್ಜಿಗಳನ್ನು ಮುಗಿಲಿಗೆ ಸಲ್ಲಿಸುತ್ತ ಬಂದಿದೆ. ಇವುಗಳಲ್ಲಿ ಮೇಘಮಲ್ಹಾರ ಹಾಡುವುದೂ ಒಂದು. ಈ ರಾಗದಲ್ಲಿ 'ಸಾವನ್ ಕಿ ಋತ ಆಯೋರೆ ಬಡಿಬಡಿ ಬೂಂದನ ಲಾಗೀ ಬರಸನ್' ಬಂದಿಶನ್ನು ಆಲಿಸುವಾಗ ಮನ ಖುಷಿಯಿಂದ ತೋಯುತ್ತದೆ. ಈ ಬಂದಿಶ್‌ಗಳು ಅಗಲಿದ ಪ್ರಿಯಕರನ್ನು ಕೂಡುವ ವಿರಹಿಯ ಉತ್ಕಟ ಹಂಬಲದೊಂದಿಗೆ ಕೊನೆಗೊಳ್ಳುತ್ತವೆ. ಒಮ್ಮೆ ತಾನಸೇನನಿಗೆ ದೀಪಕರಾಗ ಹಾಡಿ ದೀಪ ಬೆಳಗಿಸಿದ ಬಳಿಕ, ದೇಹ ತಾಪದಿಂದ ಸುಡಲಾರಂಭಿಸಿತಂತೆ. ಆಗವನ ಇಬ್ಬರು ಹೆಮ್ಮಕ್ಕಳು ಮೇಘಮಲ್ಹಾರ ಹಾಡಿ ತಂಪುಗೊಳಿಸಿದರಂತೆ. ಪುರಾಣದಲ್ಲಿ ಮಳೆಯ ಖಾತೆ ಯಾವಾಗಲೂ ಗಂಡಸರಿಗೇ ವಹಿಸಲಾಗಿದೆ. ಆದರಿಲ್ಲಿ ಮಳೆ ಬರಿಸುತ್ತಿರುವುದು ಮಳೆ'ರಾಯ'ನಲ್ಲ. ಮಳೆಯಮ್ಮಗಳು.

ಕಾರ್ಗಾಲದ ವೈಭವವನ್ನು ಕವಿಗಳು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಅವುಗಳಲ್ಲಿ ಬೇಂದ್ರೆಯವರ ಶ್ರಾವಣ ಪದ್ಯಗಳು ನನಗೆ ಹಿಡಿಸುತ್ತವೆ. ಅಲ್ಲಿ ಮಳೆ ಕಾಣುವುದಲ್ಲ, ಕೇಳಿಸುತ್ತದೆ ಕೂಡ. 'ಶ್ರಾವಣ' ಎಂದರೆ ಕೇಳು ಎಂಬರ್ಥವೂ ಇದೆಯಷ್ಟೆ. ಅದರಲ್ಲೂ ಮಲೆನಾಡ ಸೆರಗಾದ ಧಾರವಾಡದ ಮಳೆಯೆಂದರೆ 'ಮಳೆಗಳಿಗೆ ಮತ್ತ ಹೊಳೆಗಳಿಗೆ ಆಗ್ಯಾದ ಲಗ್ನ ಅದರಾಗ ಭೂಮಿ ಮಗ್ನ'; ಆಗಸಭೂಮಿಗಳು ಮಳೆಯ ನೆಪದಲ್ಲಿ ಕೂಡುವ ಈ ಪರಿ, ಅಲೌಕಿಕಲೌಕಿಕಗಳ ಮಿಲನದಂತಿದೆ. ಜಲ ಆಗಸದಲಿದ್ದೇನು ಫಲ? ಅಧಃಪತನವಾದಾಗಲೇ ಸಾರ್ಥಕ. ಮಳೆ ಬೇಂದ್ರೆಯವರಲ್ಲಿ ಅವರಂತೆಯೇ ಚಂಚಲ. ಕುವೆಂಪು ಅವರಲ್ಲಿ ಘನಗಂಭೀರ. "ಸರ್ವವ್ಯಾಪಿ ಮೇಘರಾಹು ರವಿಯ ನುಂಗಿದೆ, ಭೀಮದೀರ್ಘ ವ್ಯೋಮಚುಂಬಿ, ವರ್ಷಸ್ನಾತ ಚಿರಶ್ಯಾಮ ಗಿರಿಅರಣ್ಯ ಶ್ರೇಣಿಶ್ರೇಣಿ ಹಬ್ಬಿದೆ: ಮಬ್ಬು ಹಿಡಿದು ತಬ್ಬಿದೆ!'; ಸಂಸ್ಕೃತದ ಗುಡುಗು ಸಿಡಿಲುಗಳ ನಡುವೆ, ಕೆನ್ನೆತ್ತರ ತುಂಗೆ ಗಿಡಮರಗಳನ್ನು ಕೊಚ್ಚಿ ಪ್ರವಹಿಸಿದಂತೆ ಭಾಸವಾಗುತ್ತದೆ. ಬೇಂದ್ರೆಯವರಲ್ಲಿ ಮಳೆ ಊರ್ವಶಿಯ ನರ್ತನ; ಕುವೆಂಪು ಅವರಲ್ಲಿ 'ಕದ್ದಿಂಗಳು ಕಗ್ಗತ್ತಲು ಕಾರ್ಗಾಲದ ರಾತ್ರಿ'ಯಲ್ಲಿ ವರ್ಷರೂಪಿ ಭೈರವನು ಮಾಡುವ ಪ್ರಳಯಾಂತಕ ತಾಂಡವ.

'ಕುರಿತೋದದೆಯುಂ ಕಾವ್ಯಪ್ರಯೋಗ ಮತಿ'ಗಳಾದ ಗ್ರಾಮೀಣ ಜನ ಈ ವಿಷಯದಲ್ಲಿ ಕಮ್ಮಿಯೇನಿಲ್ಲ. ಅವರ ಪಾಲಿಗೆ ಮಳೆ ಸೌಂದರ್ಯೋಪಾಸನೆಯ ವಸ್ತುವಲ್ಲ. ಜೀವನ್ಮರಣದ ಪ್ರಶ್ನೆ. ಹುಚ್ಚುಮಳೆ, ದೆವ್‌ಮಳೆ, ಅಡ್ಡಮಳೆ, ಹಾಕ್ಯಂಡು ಕುಟ್ತಾಯಿದೆ ಎಂದರೆ ಕಂಗೆಟ್ಟ ವಿಸ್ಮಯಭಾವ; ತೂಪುರು ಕಣೊ, ಮಕ್ಕಳುಚ್ಚೆ ಹೊಯ್ದಂಗೆ, ಕಂಬಳಿ ನೆನೀಲಿಲ್ಲ ಎನ್ನುವಾಗ ಅತೃಪ್ತಿ; ಜಿಬಿರು, ತಟತಟ, ಜಿಟಿಜಿಟಿ, ಬೆಳಿಗ್ಗೇನೇ ಹಿಡ್ಕೊಂಡಿದೆ, ಕಚ್ಕೊಂಡಿದೆ, ಬಾಣಕ್ಕೆ ತೂತ ಬಿದ್ದದೆ ಎಂಬಲ್ಲಿ ಬೇಸರ; 'ಕುಟುಕೋ ಮಳೆ ಬ್ಯಾಡ. ಲೊಟಕೊ ಗಂಡ ಬ್ಯಾಡ' ಎಂದ ಹೆಂಡತಿ ಎಷ್ಟು ರೋಸಿಹೋಗಿರಬೇಕು? ಹಿಡಿದ ಮಳೆ ಬಿಡದಿದ್ದರೆ, 'ಮುಂಜಾನೆ ಬಂದ ಮಳೆ ಸಂಜೆ ಬಂದ ಅಳಿಯ ಹೋಗೋದಿಲ್ಲ' ಎನ್ನುವುದುಂಟು.

ಇಲ್ಲಿರುವುದು ಬೇಸರವಲ್ಲ. ಗೊಣಗಾಡುತ್ತಲೇ ವಾಸ್ತವವನ್ನು ಸಂತೋಷದಲ್ಲಿ ಒಪ್ಪುವ ಭಾವ. ರಾಯರು ಮಾವನ ಮನೆಗೆ ಬಂದಿರುವುದೇ ಮಡದಿಗಾಗಿ. ಸಂಜೆಗೆ ಹೋಗೆಂದರೆ ಹೇಗೆ? ಪ್ರತಿ ಮಳೆಗೂ ಅದರದ್ದೇ ಚಹರೆಯುಂಟು: ಹುಬ್ಬೇ ಮಳೆಗೆ ಗುಬ್ಬಿ ಪುಕ್ಕ ತೋಯಲ್ಲವಂತೆ; ಅಸಲೆ ಮಳೆಗೆ ಸೊಸಲು ಬೆಟ್ಟ ಹತ್ತಿತ್ತಂತೆ; ಅಸಲೆ ಮಳೆಗೆ ಹೆಂಚೆಲ್ಲ ಹುಲ್ಲಂತೆ. ಇವುಗಳಲ್ಲಿ ಕೊನೆಯ ಮಾತಿನ ಅರ್ಥ ತಿಳಿಯಬೇಕಾದರೆ ಆಗಸ್ಟ್ ತಿಂಗಳಲ್ಲಿ ಮಲೆನಾಡಿಗೊ ಕರಾವಳಿಗೊ ಭೇಟಿ ಕೊಡಬೇಕು. ಮನೆಯ ಛಾವಣಿ ಅಕ್ಷರಶಃ ಗದ್ದೆಯಾಗಿ ಶೋಭಿಸುತ್ತಿರುತ್ತದೆ.

ರೈತಾಪಿಗಳು ಮಳೆಯನ್ನು ಬಂಧುವಿನಂತೆ ಬರಮಾಡಿಕೊಳ್ಳುತ್ತಾರೆ; ಪ್ರೀತಿಯಿಂದ ಬಾವಣಿಕೆ ಮಾಡುತ್ತಾರೆ; ತಮಾಷೆಯಿಂದ ರೇಗಿಸುತ್ತಾರೆ. ಅದೊಂದು ನಿಸರ್ಗದ ಜತೆಗಿನ ಬಹುರೂಪೀ ಸಂವಾದ. 'ರೋಣಿ ಮಳೆಗೆ ಓಣಿ ತುಂಬಾ ಜೋಳ'ವಂತೆ; 'ಮಗಿ ಮಳಿಗಿ ಹಗಿಯೆಲ್ಲ ಜ್ವಾಳ' ಎಂಬ ಕುಂದಿಲ್ಲದ ಭರವಸೆ ಅವರಿಗೆ. ಮಳೆ ಕೈಕೊಟ್ಟಾಗ ಹುಟ್ಟುವ ವಿಷಾದ ಮಾತ್ರ ಘೋರ. 'ಬಂದ್ರೆ ಆರಿದ್ರಾ ಇಲ್ಲಾಂದ್ರೆ ದರಿದ್ರ', 'ಉತ್ತರಿ, ನಾ ಬರದಿದ್ದರೆ ನೀವು ಸತ್ತರಿ'. ರಾಜಕಾರಣಿಗಳಂತೆ ಭರವಸೆ ಕೊಡುವ; ಕೊಟ್ಟ ಮಾತಿಗೆ ತಪ್ಪಿ ಬೈಸಿಕೊಳ್ಳುವ ವಿಧಿ ನಿಸರ್ಗಕ್ಕೂ ತಪ್ಪಲಿಲ್ಲ. ಈ ಅನಿಶ್ಚಿತತೆಯೆ ನಂಬಿಕೆಯ ತತ್ವವನ್ನು ಹುಟ್ಟಿಸುತ್ತದೆ. ಈ ತತ್ವಶಾಸ್ತ್ರದಲ್ಲಿ ಜನರ ಲೋಕದೃಷ್ಟಿಯೂ ಪ್ರಕಟವಾಗುತ್ತದೆ. 'ಮಳೆಬಂದರೆ ಕೇಡಲ್ಲ. ಮಗ ತಿಂದರೆ ಕೇಡಲ್ಲ' ಎಂಬ ಹೇಳಿಕೆಯನ್ನೇ ಗಮನಿಸಿ. ಇದನ್ನು ಮಹಿಳೆಯರು ಹೇಗೆ ಸ್ವೀಕರಿಸಿರಬಹುದು? ಬದಲಾಗಿ ಅವರು 'ಮಳೆಗಾಲದ ಬಿಸಿಲು ನಂಬಬಾರ್ದು, ಮನೆಗಂಡನ ನಗೆ ನಂಬಬಾರ್ದು' ಎಂದು ಮುಯ್ಯಿ ತೀರಿಸಿರುವುದುಂಟು. ಹೆಣ್ಣನ್ನು ಚಂಚಲೆಯೆನ್ನುವ ಹೇಳಿಕೆಗಳು ಜಗತ್ತಿನಾದ್ಯಂತ ಸಿಕ್ಕಿಯಾವು. ಆದರೆ ಗಂಡಸರ ತಲೆ ಮೊಟಕುವ ಧೈರ್ಯ ತೋರಿಸಿದ್ದು ಮಾತ್ರ ಕನ್ನಡತಿಯೇ. ಆದರಿ ಮಳೆಗೆ ಆದವನೆ ಗಂಡ ಎಂಬ ಇನ್ನೊಂದು ಮಾತಿದೆ. ಆಷಾಢದಲ್ಲಿ ಮದುವೆ ನಿಷೇಧವಾಗಿರುವುದರಿಂದ, ಜ್ಯೇಷ್ಠದಲ್ಲಿ ಸಿಕ್ಕವನನ್ನೇ ಒಪ್ಪಿಕೊಳ್ಳುವ ಇಕ್ಕಟ್ಟಿದು. ಜೀವನ ಸಂಗಾತಿ ಆಯ್ಕೆಯ ಹಕ್ಕನ್ನು ಸಮಾಜ ಅರ್ಧ ಕಿತ್ತುಕೊಂಡಿತ್ತು; ಉಳಿದರ್ಧವನ್ನು ಮಳೆ ಕಸಿಯಿತು.

ಮಳೆಚಳಿ ಮನುಷ್ಯರನ್ನು ಮನೆಯೊಳಗೆ ಬಂಧಿಸುತ್ತವೆ. ಹಸಿವನ್ನು ಹೆಚ್ಚಿಸುತ್ತವೆ. ಬಿಸಿಗೆ ಬೇಡಿಕೆ ಇಡುತ್ತವೆ. ಕಾರೇಡಿ ಸಾರು, ಮೀನುಹುಳಿ ಮುಂಚೂಣಿಗೆ ಬರುತ್ತವೆ. ಶೀಸೆಯ ತಳದಲ್ಲಡಗಿದ ಹನಿರಸ ಅಮೃತವಾಗುತ್ತದೆ. ಸುಪ್ತ ಕಾಮ ಕೆರಳುತ್ತದೆ. 'ಕಾರಬ್ಬದ್ ಜಿಡಿ, ಕದಾ ಹಾಕಂಡ್ ಜಡಿ' ಎಂದು ಯಾರೋ ಮಹಾಶಯ ಕರೆಯನ್ನೂ ಕೊಟ್ಟಿದ್ದಾನೆ. ಮಳೆಯ ಬಣ್ಣನೆಗಳಲ್ಲಿ ಜಡಿ ಚಚ್ಚು ಬಡಿ ಕಚ್ಚು ಕ್ರಿಯಾಪದಗಳಿರುವುದು ಗಮನಾರ್ಹ. 'ಋಷ್ಯಶೃಂಗ' ನಾಟಕದ ಹುಡುಗಿ, ತನ್ನನ್ನು ಹದಗೊಂಡ ನೆಲಕ್ಕೂ ತನ್ನೊಡನೆ ಕೇಳಿಯಾಡಲಿರುವ ಋಷಿಪುತ್ರನನ್ನು ಮಳೆಗೂ ಹೋಲಿಸುತ್ತ, ಕ್ರಿಯಾಪದಗಳಲ್ಲೇ ಅವನನ್ನು ಆವಾಹಿಸುತ್ತಾಳೆ. ಆಷಾಢದಲ್ಲಿ ಭೂಮಿಯ ಮೇಲಣ ಚರಾಚರಕ್ಕೂ ಬೆದೆ. ಹೊಲಗೆಲಸ ಕೆಡಬಾರದೆಂದೊ ಏನೊ, ಈ ಮಾಸದಲ್ಲಿ ಹೊಸ ದಂಪತಿಗಳನ್ನು ಅಗಲಿಸುವ ರಿವಾಜಿದೆ. ಆದರೆ ಪ್ರಾಣಿಗಳಿಗೆ ಕಟ್ಟಳೆ ವಿಧಿಸುವವರು ಯಾರು? ನಾಯಿಗಳು ನಡುಬೀದಿಯಲ್ಲಿ ರತಿಕೇಳಿ ಆರಂಭಿಸುತ್ತವೆ; ಗುಂಡಿಗೊಟರೆಯ ನೀರು ಮಿಲನಕಾತರ ಕಪ್ಪೆಗಳ ಸಮೂಹಗಾನಕ್ಕೆ ವೇದಿಕೆಯಾಗುತ್ತದೆ. ಈ ರತಿನಿರತ ಮಂಡೂಕಗಳಿಗೆ ಹಾವು ಹೊಂಚಿ ಬರುತ್ತದೆ. ಇದೇ ಹಂಗಾಮಿನಲ್ಲಿ ಅತಿಕಾಮಿಯಾದ ಜೋಕುಮಾರ ಸವಾರಿ ಹೊರಟು, ಬೀದಿಯ ಹೆಂಗಳೆಯರನ್ನು ಕೆಣಕಿ ಕೈಕಾಲು ಮುರಿಸಿಕೊಂಡು ಪ್ರಾಣಬಿಡುವನು. ಮಳೆಯ ರಂಗಭೂಮಿಯಲ್ಲಿ ನಡೆವ ಜೀವನ್ಮರಣದ ಆಟಗಳು ದಿಗಿಲನ್ನೂ ಹುಟ್ಟಿಸುತ್ತವೆ.

ಮಳೆಗೂ ಕಾಮಪ್ರೇಮಕ್ಕೂ ಇರುವ ನಂಟನ್ನು ಹೆಚ್ಚು ಶೋಷಿಸಿದವರು ಬಹುಶಃ ಸಿನಿಮಾದವರೇ ಇರಬೇಕು. ಅಲ್ಲಿ ತಿರುಗಾಟಕ್ಕೆ ಬಂದ ನಾಯಕ ನಾಯಕಿ ಮಳೆಗೆ ಸಿಕ್ಕಿಕೊಳ್ಳುವ ದೃಶ್ಯವೊಂದು ಕಡ್ಡಾಯವಾಗಿರುತ್ತದೆ. ಮುಂದಿನ ಘಟನಾವಳಿ ನಿರೀಕ್ಷಿತ: ಇಬ್ಬರೂ ತೊಯ್ದು ತಪ್ಪಡಿಗಳಾಗಿ ಪಾಳುಬಿದ್ದ ನಿರ್ಜನ ಮನೆಯೊಂದರಲ್ಲಿ ಆಶ್ರಯ ಪಡೆಯುತ್ತಾರೆ. ನಾಯಕ ಸೌದೆ ಒಟ್ಟುಹಾಕಿ ಅಗ್ನಿ ಪುಟಿಸುತ್ತಾನೆ. ಒದ್ದೆ ಅಂಗಿಯೊಳಗಿಂದ ಹುರಿಗೊಳಿಸಿದ ಮೈಕಟ್ಟು, ಎದೆಗೂದಲು; ತೊಯ್ದ ಸೀರೆಗಂಟಿಕೊಂಡ ಕಾಯದ ಏರಿಳಿತ; ಅವನ ಕಣ್ಣಲ್ಲಿ ದುಡುಕು, ಯಾಚನೆ, ಚಿರತೆಹಸಿವು. ಅವಳ ಚಿಗರೆಗಣ್ಣಲ್ಲಿ ಆಸೆ, ಗೊಂದಲ, ಹಿಂಜರಿಕೆ, ಆತಂಕ. 'ಬಯಕೆ ತೋಟದ ಬೇಲಿಯೊಳಗೆ ಕರಣಗಣದಿ ರಿಂಗಣ'. ಹಿನ್ನೆಲೆಯಲ್ಲಿ 'ಭಿಗೇ ಆಜ್ ಇಸ್ ಮೋಸಂ ಮೇ ಲಗೀ ಕೈಸೀ ಏ ಅಗನ್' ಹಾಡು. ಸುಪ್ತ ಭಾವನೆಗಳನ್ನು ಬಡಿದೆಬ್ಬಿಸಲು ಮನ್ಮಥನ ಕೈಗೆ ಮಳೆಬಿಲ್ಲನ್ನು ಕೊಟ್ಟಿದ್ದು ಸಾರ್ಥಕವಾಯಿತು.

